Form No.4 (Civil)
Deposition
Sheets
(R.P.No.57)

ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

ಯಾದಗಿರಿ

ಸ್ಪೆಷಲ್.ಸಿ. ಸಂಖ್ಯೆಃ 37/2023

ಪ್ರಾ.ಸಾ. 9 ಚಾ.ಸಾ. 8

| | | |
|---|---|---|
| ಹೆಸರು | : | ಸುನೀಲ ಕುಮಾರ |
| ತಂದೆಯ ಹೆಸರು | : | ಶಂಕರ ರಾಥೊಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಸಹಾಯಕ ಅಭಿಯಂತರರು |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 10-03-2026

ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

2021 ರಿಂದ 2023 ರವರೆಗೆ ನಾನು ಕಿರಿಯ ಅಭಿಯಂತರನಾಗಿ ಲೋಕೋಪಯೋಗಿ ಇಲಾಖೆಯಲ್ಲಿ ಶಹಾಪೂರ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನಾನು ಈ ಪ್ರಕರಣದಲ್ಲಿ ವಡಗೇರಾ ಪೊಲೀಸರು ದಿಃ 02.03.2023 ರಂದು ನಮ್ಮ ಕಚೇರಿಗೆ ಪತ್ರ ಬೆದು ಗುನ್ನಾ ನಕಾಶೆ ತಯಾರಿಸಿಕೊಂಡು ವಂತೆ ಕೋರಿದ್ದು, ಅದರಂತೆ ನಮ್ಮ ಕಚೇರಿಯಿಂದ ನನಗೆ ನಿಯೋಜಿಸಿದ್ದು, ನಾನು ದಿಃ 18.03.2023 ರಂದು ಸಮಯ ಬೆಃ 11.30 ಕ್ಕೆ ಗುನ್ನೆ ಸ್ಥಳವಾದ ಬುದನಾಳ ಗ್ರಾಮಕ್ಕೆ ಬೇಟಿಕೊಟ್ಟು ಎಚ್ ಸಿ 36 ಹಣುಮಂತರಾಯ ರವರು ಹಾಜರು ಇದ್ದು, ಗುನ್ನೆ ಸ್ಥಳದ ಕಚ್ಚಾ ನಕ್ಷೆಯನ್ನು ಸ್ದಳದಲ್ಲಿ ತಯಾರಿಸಿಕೊಂಡು ನಂತರ ಕಛೆರಿಗೆ ಹಿಂದಿರುಗಿ ಪಕ್ಕಾ ನಕಾಶೆ ತಯಾರಿಸಿ ನಮ್ಮ ಸಹಾಯಕ ಕಾರ್ಯ ನಿರ್ವಹಕ ಅಭಿಯಂತ್ರರರು ಶಹಾಪೂರ ರವರಿಗೆ ಸಲ್ಲಿಸಿ ನಂತರ ಅದನ್ನು ದಿಃ 23-03-2023 ರ ಮುಖ ಪತ್ರದೊಂದಿಗೆ ಆರಕ್ಷಕ ಉಪ ಅಧಿಕ್ಷಕರ ಚಾಸಾಃ 20 ರವರಿಗೆ ಸಲ್ಲಿಸಲಾಗಿರುತ್ತದೆ. ಸಾಕ್ಷಿಗೆ ಕಡತದಲ್ಲಿನ ಮುಖ

ಪತ್ರ ಮತು ್ತ ನಕಾಶೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.8 ಮತ್ತು 9 ಎಂದು ನಿಪಿ 9 ರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.9 (ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಸಿ ಎಸ್ ಎಮ್ ವಕೀಲರಿಂದ</u>

3. ಚಾಸಾಃ 20 ರವರು ನನಗೆ ನೇರವಾಗಿ ನಕಾಶೆ ತಯಾರಿಸಲು ಪತ್ರ ಬರೆದಿಲ್ಲ ಎಂದರೆ ಸರಿ. ನಮ್ಮ ಕಛೇರಿಯಿಂದ ನನಗೆ ನಕಾಶೆ ತಯಾರಿಸಿ ಕೊಡಲು ಲಿಖಿತ ಆದೇಶ ನೀಡಿಲ್ಲ ಎಂದರೆ ಸರಿ. ನಮ್ಮ ಕಛೇರಿಯಿಂದ ನೀಡಿದ ಮೌಖಿಕ ಆದೇಶದಂತೆ ನನಗೆ ಗುನ್ಹಾ ಸ್ಥಳದ ಸರ್ವೆ ನಂಬರ ಮತ್ತು ಹೊಲ ನಿಖರವಾಗಿ ಹೇಳಿಲ್ಲ ಎಂದರೆ ಸರಿ. ಗುನ್ಹಾ ಸ್ಥಳಕ್ಕೆ ಭೇಟಿ ನೀಡುವ ಬಗ್ಗೆ ಚಾಸಾಃ 20 ರವರಿಗೆ ನಾನು ಯಾವುದೇ ಪತ್ರ ವ್ಯವಹಾರ ಮಾಡಿಲ್ಲ. ನಿಪಿ 8 ಮತ್ತು 9 ಹೊರತು ಪಡಿಸಿ ಇತರೆ ಯಾವುದೇ ದಾಖಲೆ ಸ್ಥಳಕ್ಕೆ ಭೇಟಿ ನೀಡಿದ್ದೆ ಎಂದು ತೋರಿಸಲು ಹಾಜರು ಪಡಿಸಿಲ್ಲ ಎಂದರೆ ಸರಿ. ಸ್ಥಳದಲ್ಲಿ ಯಾವುದೇ ಭಾವ ಚಿತ್ರತೆಗೆದಿಲ್ಲ ಎಂದರೆ ಸರಿ. ನಿಪಿ 9 ರಲ್ಲಿ ಗುನ್ಹಾ ಸ್ಥಳದ ಸರ್ವೆ ನಂಬರ ನಮೂದಿಸಿಲ್ಲ ಎಂದರೆ ಸರಿ. ಬೂದನಾಳ ಗ್ರಾಮದ ಸದರಿ ಗುನ್ಹಾ ಸ್ಥಳದ ಅಕ್ಕ ಪಕ್ಕದ ಹೊಲಗಳ ಸರ್ವೆ ನಂಬರಗಳನ್ನು ನಮೂದಿಸಿಲ್ಲ ಎಂದರೆ ಸರಿ. ಗುನ್ಹಾ ಸ್ಥಳದ ಹೊಲದಲ್ಲಿ ಮತ್ತು ಅಕ್ಕ ಪಕ್ಕದ ಹೊಲಗಳಲ್ಲಿ ಇದ್ದ ಬೆಳೆ ಯಾವುದು ಎಂದು ನಿಪಿ 9 ರಲ್ಲಿ ನಮೂದಿಸಿಲ್ಲ ಎಂದರೆ ಸರಿ.ನಿಪಿ 9 ರಲ್ಲಿ ಗುನ್ಹಾ ಸ್ಥಳ ತೊರಿಸಿದ ವ್ಯಕ್ತಿಯ ಸಹಿ ಪಡೆದಿಲ್ಲ ಎಂದರೆ ಸರಿ. ನಾನು ಯಾವುದೇ ಸ್ಥಳಕ್ಕೆ ಬೇಟಿ ನೀಡಿಲ್ಲ ಮತ್ತು ಯಾವುದೇ ಸ್ಥಳ ಪರಿಶೀಲಿಸಿಲ್ಲವಾದರೂ ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.